ಬರಬೇಕು. ಮೊನ್ನೆ ರವಿವಾರವೂ ಅಷ್ಟೆ. ಕಾನುಗುಡ್ಡೆ ಬೆಟ್ಟಕ್ಕೆ ಉಪ್ಪಾಗೆ ಬೀಜ ಹೆಕ್ಕಲಿಕ್ಕೇ ಹೋಗಿದ್ದು. ಆಗಲೂ ಗಾಯತ್ರಿಯ ವಿಷಯ ಮಾತಾಡಿದ್ದು, ಸಾಕೇ ಸಾಕು, ಈ ಸುಟ್ಟ ಮದುವೆಯೂ ಸಾಕು, ಮಕ್ಕಳೂ ಸಾಕು, ಮನುಷ್ಯ ಜನ್ಮವೇ ಸಾಕು. ಅವ್ಳಾಗಿದ್ದಕ್ಕೆ ಇಷ್ಟೆಲ್ಲ ಸೈಸಿಗ್ಯಂಡು ಬದುಕಿದ್ದಾಳೆ, ನಾನಾಗಿದ್ರೆ ಯಾವತ್ತೊ ಹೊಳೆ ಕೆರೆ ನೋಡಿಕ್ಯತ್ತಿದ್ದೆ, ಹೇಳಿದ್ದಂತೂ ಆತು. ಮನಿಗೆ ಬರೊ ಹೊತ್ತಿಗೆ ಸರಿಯಾಗಿ ಆ ಗಾಯತ್ರಿ ಹೋಗಿಬಿಟ್ಲಂತೆ ಎಂಬ ಫೋನು ಬಂದಿದ್ದೂ ಆತು. ಪ್ರಭತ್ತಿಗೆ ನಿಂತ ಕಾಲಲ್ಲೆ ಹೊರಟು ಜಗ್ಗಣ್ಣನ ಬೈಕೇರಿ ಸಣ್ಣಗದ್ದೆಗೆ ಹೋಗಿ ಗೆಳತಿಯನ್ನು ಸುಟ್ಟು ಬಂದಿದ್ದೂ ಆತು. ಮರುದಿನ ಬೆಳಿಗ್ಗೆ ಯಾಕಿನ್ನೂ ಹೆಬ್ಬಾಗಿಲು ಹಾಕ್ಕೊಂಡೇ ಇದೆಯೆಂದು ಗಡಬಡಿಸಿ ಎದ್ದು ನೋಡಿದರೆ ಪಬ್ಬಿ ಇನ್ನೂ ಮಲಗಿಯೇ ಇದ್ದಾಳೆ. ಮುಟ್ಟಿದರೆ ಮೈ ಬೆಂಕಿ ಕೆಂಡದಂತೆ ಸುಡ್ತಾ ಇದೆ! ಅತ್ಗೆ ಅತ್ಗೆ, ಎಂದು ಕರೆದರೆ ಸಣ್ಣಕೆ ಹಾಂ ಅಂದಳು. ಸಣ್ಣತ್ತಿಗೆ ತನ್ನ ಗಂಡನನ್ನೆಬ್ಬಿಸಿ ಅವನು ಬಂದು ನೋಡಿ ಅಯ್ಯೋ! ಮೈ ಸುಡ್ತಾ ಇದೆ, ಪ್ಯಾಟಿಗ್ಹೋಪದೆ ಸೈ. ಅಂದಾಗ ಬ್ಯಾಡ ಬ್ಯಾಡ, ದೂರ್ವೆ, ಜಡ್ಡು ಕುತ್ತುಂಬ್ರಿ ಕಷಾಯ ಮಾಡ್ಕೊಡಿ ಸಾಕು ಅಂದವ್ಳೂ ಪಬ್ಬಿನೆಯ. ಮರುದಿನ ಬೆಳಗಾದ್ರೂ ತಣ್ಣೀರು ಬಿಸಿನೀರಿಲ್ದೆ ನರಳ್ತಾ ಬಿದ್ದುಕೊಂಡವ್ಳೂ ಅವ್ಳೇಯ. ಆವಾಗಾದ್ರು ಪ್ಯಾಟಿಗ್ಹೋಪನ ಅಂದ್ರೆ ಅದಕೂ ಅಡ್ಡಗ್ಗೆ ಆಡಸಿ ಕುಪ್ಪಾ ಡಾಕ್ಟರ್ ಕಷಾಯ ತಂದ್ಕೊಡಿ ಸಾಕು ಅಂದವ್ಳೂ ಪಬ್ಬತ್ತಿಗೆನೆಯ. ಈಗ ನೋಡಿರೆ ಒತ್ತಾಯವಾಗಿಯಾದ್ರೂ ಶಂಕ್ರಣ್ಣನ ಜೀಪಲ್ಲಿ ಹಾಕ್ಯಂಡು ಪ್ಯಾಟೆ ಡಾಕ್ಟರ್ ಹತ್ರೇ ಹೋಗ್ಬೇಕಾಗಿತ್ತೇನೊ, ಹೋಗಿದ್ರೆ ಗುಣ ಆಗ್ತಿತ್ತೇನೊ, ಈ ನಮನಿ ಗಾಳಿ ಮಳಿಯಲ್ಲಿ ಅಂಗ್ಳ ಇಳದು ಜೀಪು ಹತ್ತೊ ತನಕ ಜ್ವರ ಬಂದವ್ಳ ಮೈ ಪೂರ್ತಿ ಒದ್ದೆಯಾಗತ್ತೆ, ಎಂಬ ಕಾರಣಕ್ಕೆ ಆ ವಿಚಾರದಿಂದ ಹಿಂದೆ ಸರದಿದ್ದೇ ತಪ್ಪಾಗಿ ಹೋಯ್ತಾ? ಎಂಬೆಲ್ಲ ಹಳ ಹಳಿಕೆ ಕಾಡ್ತಾ ಇದ್ದಿದ್ದು ಸುಳ್ಳಲ್ಲ. ಆದ್ರೆ ಈಗೆಂತಾ ಮಾಡೋದು?...ಚೆಲ್ಲಿದ ನೀರು, ಹಾರಿದ ಉಸಿರು, ಕಳೆದ ಕಾಲ, ಎಷ್ಟಂದ್ರೂ ಅಷ್ಟೆಯ. ಅಥವಾ ...ಅಥವಾ...ಅತ್ತೇರಿದ್ದಾಗ ಹೇಳ್ತಿದ್ದಾಂಗೆ ಶಾಲಿಗ್ಹೋಗ್ವಾಗಿಂದ್ಲೂ ಒಂದೇ ಜೀವ, ಎರಡು ದೇಹ ಆಗಿದ್ದ ಗೆಳತಿ ಸತ್ತಿದ್ದೇ ದೊಡ್ಡ ಹೊಡ್ತ ಆಗಿ ಎದಿಗೆ ಗುದ್ದಿ ಬಿಟ್ಟಿತಾ?...ಇಲ್ಲಾಂದ್ರೆ ಬರೀ ಎರಡು ದಿನದ ಜ್ವರಕ್ಕೆ ಯಾರಾದ್ರೂ ಸಾಯ್ತಾರ?....ಶಣ್ಣತ್ತಿಗೆ ಬಾವಿ ಕಟ್ಟೆಗೊರಗಿ ನಿಂತು ಅದೆಷ್ಟು ಹೊತ್ತಾಗಿತ್ತೊ, ಮಗಳು ಬಂದು ಅಮಾ, ಅಂದಾಗ ಈ ಲೋಕಕ್ಕೆ ಬಂದಳು.

ಬಂದವಳು ಹೊರಗೆ ನೋಡಿದರೆ ಈ ಲೋಕವನ್ನೇ ಕೊಚ್ಚಿಕೊಂಡು ಹೊಂಟಂತೆ ಮಳೆ ಆರ್ಭಟಿಸುತ್ತಿದೆ. ಕತ್ತಲೆ ಮತ್ತಷ್ಟು ತುಂಬಿಕೊಂಡು ಸಂಜೆಯಾಗುತ್ತಿದೆ. ಅಯ್ಯೊ, ದನ ಕರಿಯೊ ಹೊತ್ತಾತು, ಇಲ್ಲೇ ನಿಂತು ಬಿಟ್ಟಿದ್ದೇನಲ್ಲ ಎಂದು ಗಡಬಡೆಯಲ್ಲೇ ಮಗಳತ್ತ ನೋಡಿ 'ಎಂತದೆ?' ಅಂದಳು. 'ಅಮ್ಮಾ, ಪ್ರಭತ್ತೆ ಇಷ್ಟು ಬ್ಯಾಗ ಹ್ಯಾಂಗ್ ಹೋಗಿ ಬಿಟ್ಲು?' ಮಗಳ ಪ್ರಶ್ನೆಗೆ ದೇವ್ರಿಗೇ ಗೊತ್ತು ಎಂಬಂತೆ ಮೇಲೆ ನೋಡಿ ಕೈ ತಿರುಗಿಸಿ ಮಾತಿಲ್ಲದೆ ಕೊಟ್ಟಿಗೆಗೆ ಹೊಂಟು ಬಿಟ್ಟಳು.


ಹೌದು, ಪಬ್ಬತ್ತಿಗೆ ಇಷ್ಟು ಆಕಸ್ಮಿಕವಾಗಿ ಸತ್ತು ಹೋಗುತ್ತಾಳೆಂದು ಯಾರಿಗೇನು ಕನಸಾದರೂ ಬೀಳಲು ಸಾಧ್ಯವಿತ್ತಾ? ಅಥವಾ ಯಾರ ಕೊನೆಯುಸಿರು ಯಾವ ಕ್ಷಣದಲ್ಲಿ ನಿಲ್ಲುತ್ತದೆಂದು ಯಾವ ಡಾಕ್ಟರಿಗಾದ್ರೂ ಗೊತ್ತಾಗುತ್ತಾ?...ಅದಕೇ ಈ ಜನ್ಮಕ್ಕೆ ನೀರ ಮೇಲಿನ ಗುಳ್ಳೆ ಅನ್ನೋದಲ್ಲವಾ?....ಇಲ್ಲ, ಏನೇನೂ ಇಲ್ಲ ನಮ್ಮ ಕೈಲಿ. ಬರಿ ಪುಕ್ಸಟೆ ಯಂದು ತಂದು ಹೇಳಿ ಗುದ್ಯಾಡೋದಷ್ಟೆಯ...ಶಣ್ಣತ್ತಿಗೆ ದನ ಕರಿಯುತ್ತ ಒಳ ಬಾಯಲ್ಲೇ ಹಲುಬಿಕೊಂಡಳು.

'ತಂದೇ ತಂದು ಮಳ್ಳ ಹಟ ಆಗಿತ್ತು ಅದಕೆ. ಹಿರಿಯ ಕಿರಿಯ ಹೇಳೂ ಇಲ್ದೆ ಮಾತಾಡ್ತಿತ್ತು. ಅದೆಷ್ಟು ಬಗಿ ತರದಲ್ಲಿ ಮದುವ್ಯಾಗು, ಮದುವ್ಯಾಗು ಅಂದ್ರೂ ಒಬ್ರ ಮಾತೂ ಕೇಳಿದ್ದಿಲ್ಲೆ. ಅಂತೂ ಸುಟ್ಟ ಕೂಸಿನ ಕತೆ ಇಷ್ಟಾಗಿಹೋತು.' ರಾತ್ರಿ ಫಳಾರಕ್ಕೆ ಕುಳಿತಾಗ ನುಂಗಿದ ತುತ್ತು ಹಿಂದೇ ಬರುವಂತೆ ಹೇಳಿ ಮಿಡಿಗಣ್ಣೀರು ಉದುರಿಸಿದ ಸೀತಣ್ಣನ ಮಾತಿಗೆ ತಮ್ಮಂದಿರು, ನಾದ್ನಿಯರು, ಏನೂ ಹೇಳದೆ ತಾವೂ ಹನಿಗಣ್ಣಾದರೂ ತಮ್ಮನ ಮಗ ಆರನೇಯತ್ತೆ ಪೋರ ಸುರೇಶ ಪಟಕ್ಕನೆ ಕೇಳಿದ, 'ಬಪ್ಪಾ, ಪ್ರಭತ್ತೆ ತನಗೆ ಯಂತಕ್ಕೆ ಮದುವೆ ಬ್ಯಾಡ ಹೇಳ್ತಿತ್ತು?' 'ಯಂತಕ್ಕೆ ಹೇಳಿ ಯಾರಿಗೂ ಗೊತ್ತಿಲ್ಲೆ. ತನಗೆ ಮದುವೆ ಬ್ಯಾಡ ಅಂದ್ರೆ ಬ್ಯಾಡ ಅಷ್ಟೆಯ ಹೇಳ್ತಿತ್ತು. ಖರೆವಾಗ್ಲು ಅದರ ಮನಸಲ್ಲಿ ಎಂತ ಇತ್ತೊ ದೇವ್ರಿಗೇ ಗೊತ್ತು.'

ದೇವ್ರಿಗೊಂದೇ ಅಲ್ಲ, ಶಣ್ಣತ್ತಿಗೆಗೂ ಗೊತ್ತಿತ್ತಲ್ಲ. ಆದರವಳು ಗಂಡನ ಕೈಲೂ ಆ ಸಂಗ್ತಿ ಬಾಯಿ ಬಿಟ್ಟಿರ್ಲಿಲ್ಲ. ಯಾಕೇಂದ್ರೆ ಹೇಳಿ ಕೇಳಿ ಹೆಂಗಸರ ಮಾತು. ಅದ್ರಲ್ಲೂ ಅದು ಗಾಯತ್ರಿ ಗಂಡನ ಸುದ್ದಿ. ಮನೆ ಮಜ್ಜಿಗೆ ತಗಂಡ್ಹೋಗಿ ಬೈನೆ ಮರದಡಿಗೆ ಕುಂತು ಕುಡಿಯೊ ಸಂದರ್ಭ. ಅದನ್ನೆಲ್ಲ ಗಂಡಸ್ರ ಕೈಲಿ ಹೇಳಿ ಬೈಸಿಕೊಳ್ಳೋದು ಬ್ಯಾಡ. ನೀನಿದನ್ನೆಲ್ಲ ಯಾರ ಕೈಲೂ ಹೇಳ್ಲಿಕ್ಕಿಲ್ಲ ಎಂದು ಪಬ್ಬತ್ತಿಗೆ ಭಾಷೆ ಬ್ಯಾರೆ ತಗೊಂಡಿದ್ಲು. ಹೀಂಗಾಗಿ ಅವಳ ಮನಸು ಮತ್ಯಾರಿಗೂ ಅರ್ಥವಾಗಿರ್ಲಿಲ್ಲ. ಆದರೆ ಆ ಮನೆ ಮಜ್ಜಿಗೆಯ ಪ್ರತಾಪ ಒಂದೆರಡೇ ಅಲ್ಲ, ಹಾಂಗೆಲ್ಲ ಹೇಳಿ ಮುಗಿವಂಥದೂ ಅಲ್ಲ. ಆದ್ರೂ ತಡೀಲಾರ್ದ ಹೊಟ್ಟೆ ಸಂಕ್ಟಕ್ಕೆ ತಾವಿಬ್ಬರೆ ಇದ್ದಾಗ ಬಾಯಿ ಬಿಡ್ತಿದ್ದಳು. ಇವತ್ತು ಹೀಂಗಾಯ್ತಂತೆ, ಇವತ್ತು ಹಾಂಗಾಯ್ತಂತೆ. ...ಇವತ್ತು ಗಾಯತ್ರಿ ಗಂಡ ಕುಡಕೊಂಡು ಬಂದ್ಕೊಂಡು ಅವ್ಳ ಬೆನ್ನು ಮುರಿ ಹೊಡದು ಮಲಗಿಸಿದ್ನಂತೆ...ಇವತ್ತು ಮನೆಲ್ಲಿದ್ದ ಪಾವಕ್ಕಿನೂ ತಗೊಂಡ್ಹೋಗಿ ಹೆಂಡ ಕುಡದು ಬಂದ್ನಂತೆ....ಇವತ್ತು ಒದರತಾ ಒದರತಾ ಆರು ತಿಂಗ್ಳ ಮಗನ ಕೈ ಹಿಡದೆತ್ತಿ ಹೊತಾಕಿಬಿಟ್ನಂತೆ. ಅದೇನೊ ನಸೀಬಕ್ಕೆ ಹಿಳ್ಳೆ ಮಾಣಿಗೆ ಯಾವ್ದೇ ಪೆಟ್ಟಾಗ್ಲಿಲ್ಲವಂತೆ...ಇವತ್ತು ತಾಯಿ ಮುದುಕಿ ಕುಡೀಬ್ಯಾಡವೊ, ಶರೀರಕ್ಕೆ ಒಳ್ಳೇದಲ್ಲ ಅಂದಿದ್ದಕ್ಕೆ ಮಧ್ಯ ರಾತ್ರಿಯಲ್ಲಿ ಕೈ ಹಿಡಿದೆಳದು ಅಂಗ್ಳಕ್ಕೆ ದೂಡಿ ಬಿಟ್ನಂತೆ. ಒಂದಿನ ಒಂದ್ಕಾಲ ಹೇಳಿಲ್ಲದೆ ಊರೆಲ್ಲಾ ಉಂಡು ಮಲಗಿದ ಕೂಡ್ಲೆ ಇವನ ಆರ್ಭಟ ಶುರುವಾಗೋದಂತೆ.

....ರಾತ್ರಿಯೆಲ್ಲ ಒದರೋದು, ಹಗಲೆಲ್ಲ ಗಡದ್ದಾಗಿ ಉಂಡು ಬಿದ್ಕೊಳ್ಳೋದು, ಒಂದೇ ಒಂದು ಕಡ್ಡಿ ಇತ್ಲಾಗಿಂದತ್ಲಾಗಿ ಎತ್ತಿಡೋದಿಲ್ವಂತೆ. ತೋಟ ಹಾಳಾಗೋದನ್ನು ಕಾಣಲಾರ್ದ ಜೀವಸಂಕ್ಟಕ್ಕೆ ಅತ್ತೆ ಸೊಸೆನೇ ಸೇರಿ ಅಲ್ಲೇ ಗೋಣಿ ಪಾಟಿನ ಮ್ಯಾಲೆ ಮಗನ ಮಲಗಿಸಿಕೊಂಡು ಹುಲ್ಲು ತೆಗದು, ಕಾದಿಗೆ ಬರಗಿ, ಬಣ್ಣ ಮುಚ್ಚಿ, ಸೋಗೆ ಕಡದು ಎಲ್ಲ ಮಾಡೋದಂತೆ. ಅವರೇ ಕೊನೆ ಗೌಡಂಗೆ ದಮ್ಮಯ್ಯ ಹಾಕಿ ಕೊನೆ ಕೊಯ್ಸಿ, ನಾಕು ನಾಕೇ ಆಗಿ ಮನಿಗೆ ಹೊತ್ತು ಹಾಕಿದ್ರಂತೆ. ಅಡಿಕೆ ಸುಲಿದು, ಬೇಯ್ಸಿ, ಹರಗಿ, ಮಾಡೋದಂತೂ ಇವರೇ ಆಯ್ತು. ಮತ್ತೆರಡು ಮಕ್ಕಳ ಬಾಣಂತನದಲ್ಲೂ ಒಂದು ಚಣ ಮಲಗದೆ, ಮೈ ಕಾಸದೆ, ಬರೀ ದುಡಿದದ್ದೇ ಅಂತೆ. ಹದ್ನೈದು ದಿನದ ಹಸಿ ಬಾಣಂತಿ ಜೋರಂಬೊ ಮಳಿಯಲ್ಲಿ ಮದ್ದು ಹೊಡೆಸಲು ಪಂಪು ಹೊಡೆದು ಮರು ದಿನ ಜ್ವರ ಬಂದು ಮಲಗಿದ್ದೂ ಆಯ್ತಂತೆ. ಇಷ್ಟಾದ್ರೂ ಮತ್ತೆ ಮ್ಯಾಲಿಂದ ನೀ ಅವ್ನ ಇಟ್ಗಂಜೆ, ನೀ ಇವ್ನ ಇಟ್ಗಂಜೆ ಹೇಳಿ ಬಡಿಯೋದಂತೆ....ತಿಂಗ್ಳಿಗೊಂದ್ಸಲ ಇವ್ಳು ಅಲ್ಲಿಗ್ಹೋಗಿ ಅಥವಾ ಅವ್ಳೇ ಇಲ್ಲಿಗ್ಬಂದು ಅದು ಯಾವ ವಿಚಿತ್ರದಲ್ಲಿ ಮತ್ಯಾರಿಗೂ ಗೊತ್ತಾಗದಿದ್ದಾಂಗೆ ಸುಖ ದುಃಖ ಹೇಳಿಕೊಳ್ತಿದ್ರೊ ದೇವ್ರಿಗೇ ಗೊತ್ತು. ನಂತ್ರ ಫೋನು ಬಂದ ಮ್ಯಾಲಂತೂ ಪ್ರತಿ ರವಿವಾರ ಫೋನ್ ಇನ್ ಕಾರ್ಯಕ್ರಮ. ಅದೂ ಇನ್ ಕಮಿಂಗ್ ಮಾತ್ರ. ಮಧ್ ಮಧ್ಯೆ ಹೌದ? ಹಂಗ? ಶಿವ ಶಿವಾ. ಇಷ್ಟೆ ಇವಳ ಮಾತು. ಏನಂತೆ ಅವಳ ಸುದ್ದಿ? ಎಂದು ಯಾರೇ ಕೇಳಿದರೂ ಕೆಪ್ಪಿಯಂತೆ ಧಡಕ್ಕನೆ ಎದ್ದು ಹೋಗುವದೇ ಸೈ... ನಾನೂ ಆ ನಿತ್ಯ ನರಕ ಅನುಭವಿಸ್ಲಾರೆ. ಬ್ಯಾಡವೇ ಬ್ಯಾಡ, ಆ ಸುಟ್ಟ ಮದುವೆ. ಎಂದು ಪಬ್ಬಿ ಶಣ್ಣತ್ತಿಗೆಯೊಂದಿಗೆ ಅದೆಷ್ಟು ಸಾವಿರ ಬಾರಿ ಹೇಳಿದ್ದಳೊ.

'ಯಂತಾ ಎಲ್ಲ ಗಂಡಂದ್ರೂ ಅವ್ನ ಹಾಂಗೆಯನೆ? ಈಗ ಯಂಗ ಎಲ್ಲ ಸುಖವಾಗಿಲ್ಯನೆ?' ಅಂದ್ರೆ 'ಹಂ, ನಿಂಗಳ ಸುಖ ನಿಂಗಕ್ಕಗಿರ್ಲಿ, ಆದ್ರೆ ಯಂಗೆ



## ಬುದ್ಧ-ಯುದ್ಧ

ಮಾನವೀಯತೆಗೆ
ಪರ್ಯಾಯ ಶಬ್ದ
ಬುದ್ಧ
ಇದಕ್ಕೆ ವಿರುದ್ಧ
ಯುದ್ಧ

★ ಎಸ್.ಓಂಕಾರಯ್ಯ
ತವನಿಧಿ